ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 954 |
| 2. | ಸದಸ್ಯರ ಹೆಸರು | ಶ್ರೀ ಗೋವಿಂದ ರಾಜು<br>(ವಿಧಾನಸಭೆಯಿಂದ<br>ಚುನಾಯಿತರಾದವರು) |
| 3. | ಉತ್ತರಿಸಬೇಕಾದ ದಿನಾಂಕ | **15.12.2025** |
| 4. | ಉತ್ತರಿಸುವವರು | ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| ಪ್ರಶ್ನೆ | ಉತ್ತರ | Answer |
|---|---|---|
| (ಅ) ಯುವಜನರನ್ನು ಕೌಶಲ್ಯವಂತರನ್ನಾಗಿಸಲು ಸರ್ಕಾರ ರೂಪಿಸಿರುವ ಯೋಜನೆಗಳಾವುವು; | ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ವತಿಯಿಂದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಕೈಗೊಳ್ಳಲಾದ ಯೋಜನಾ ಕಾರ್ಯಕ್ರಮಗಳು:<br>• ಕುಶಲಕರ್ಮಿ ತರಬೇತಿ ಯೋಜನೆ (CTS) ಐಟಿಐ ತರಬೇತಿದಾರರ Craftsman Training Scheme.<br>• ಅಪ್ರೆಂಟೀಸ್‌ಶಿಪ್ ಟ್ರೈನಿಂಗ್ ಯೋಜನೆ.<br>• ಮುಖ್ಯಮಂತ್ರಿಗಳ ಕೌಶಲ್ಯ ಕನಾಟಕ ಯೋಜನೆ.<br>• ಪ್ರಧಾನ ಮಂತ್ರಿಗಳ ಸೂರ್ಯ ಘರ್ ಮುಫ್ತ್ ಬಿಜಲಿ ಯೋಜನೆ.<br>• ಪ್ರಧಾನ ಮಂತ್ರಿಗಳ ವಿಶ್ವ ಕರ್ಮ ಯೋಜನೆ.<br>• ನಲ್ ಜಲ್ ಮಿತ್ರ ಯೋಜನೆ. | Various Schemes in Government Industrial Training Institute under Department of Skill Development, Entrepreneurship & Livelihood.<br>• CTS - Craftsman Training Scheme for ITI Students.<br>• ATS-Apprenticeship Training Scheme.<br>• PMKKY-Pradhana Manthri Koushalya Karnataka Yojane.<br>• PMSGMBY- PradhanaManthri Surya Ghar Mufth Bijili Yojane.<br>• PM VishwakarmaScheme.<br>• NalJalMithra Scheme. |
| | ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ವತಿಯಿಂದ ಯುವಜನರನ್ನು ಕೌಶಲ್ಯವಂತರನ್ನಾಗಿಸಲು ಪ್ರಸ್ತುತ ರೂಪಿಸಿರುವ ಯೋಜನೆಗಳ ವಿವರ :<br>ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ:<br>• ಯುವನಿಧಿ ಪ್ಲಸ್ ಕಾರ್ಯಕ್ರಮ<br>• ILC & Future Skills ಕಾರ್ಯಕ್ರಮ<br>• ಕಲಿಕೆ ಜೊತೆ ಕೌಶಲ್ಯ ಕಾರ್ಯಕ್ರಮ<br>• ಅಳಿವಿನಂಚಿನಲ್ಲಿರುವ ಪಾರಂಪರಿಕ ಮತ್ತು ಪ್ರಾದೇಶಿಕ ಕೌಶಲ್ಯ ತರಬೇತಿ<br>(ವಿವರ **ಅನುಬಂಧ -1** ರಲ್ಲಿ ನೀಡಿದೆ.) | Details of the schemes currently being formulated by the Karnataka Skill Development Corporation to provide skills for the youth:<br>**Under the Chief Minister's Kaushalya Karnataka Scheme (CMKKY):**<br>• YuvaNidhi Plus Programme<br>• ILC & Future Skills Programme<br>• Learning with Skills Programme<br>• Traditional and Regional Skills Training<br>(Details are enclosed at **Annexure–1**) |
| | ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (GTTC) ವತಿಯಿಂದ ಯುವಜನರನ್ನು ವಿವಿಧ ವೃತ್ತಿಪರ ಕೌಶಲ್ಯಗಳನ್ನು ಕಲ್ಪಿಸಲು ಸರ್ಕಾರವು ಜಿಟಿಟಿಸಿ ಕೇಂದ್ರಗಳ ಮೂಲಕ ಮುಖ್ಯಮಂತಿಗಳ ಕೌಶಲ್ಯ ಕರ್ನಾಟಕ ಯೋಜನೆ, ಯುವನಿಧಿ, ನಲ್‌ಜಲ್, SCP & TSP ಯೋಜನೆಗಳನ್ನು ಹಮ್ಮಿಕೊಂಡಿದೆ. | To provide various vocational skills to the youth, the government has implemented schemes like Chief Minister's Skill Karnataka, Yuvanidhi, Naljal, SCP & TSP schemes through Government Tool Room and Training Centre (GTTC).. |
| | ರಾಷ್ಟ್ರೀಯ ಜೀವನೋಪಾಯ ಅಭಿಯಾನ ಸಂಜೀವಿನಿ- ಕೆ ಎಸ್ ಆರ್ ಎಲ್ ಪಿ ಎಸ್ ಸಂಸ್ಥೆ ವತಿಯಿಂದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಿಂದ ಸಂಜೀವಿನಿ-ಕೆ.ಎಸ್.ಆರ್.ಎಲ್.ಪಿ.ಎಸ್ ಮೂಲಕ ರಾಜ್ಯದಲ್ಲಿ ಯುವಜನರನ್ನು | To enhance the skills of rural youth, the Department of Skill Development, Entrepreneurship and Livelihood (SDEL), through Sanjeevini–KSRLPS, has implemented the following programmes in the State: |

ಕೌಶಲ್ಯವಂತರನ್ನಾಗಿಸಲು ಈ ಕೆಳಗಿನ ಕಾರ್ಯಕ್ರಮಗಳನ್ನು ರೂಪಿಸಿದೆ.

- ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ.
- ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಕೇಂದ್ರ ಯೋಜನೆ.

- Deen Dayal Upadhyaya Grameen Kaushalya Yojana (DDU-GKY)
- Rural Self Employment Training Institutes (RSETI) Programme.

ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರವು ಕೌಶಲ್ಯ ತರಬೇತಿಯನ್ನು ನೀಡಲಾಗುವುದಿಲ್ಲ. ಆದರೆ, ರಾಜ್ಯದಲ್ಲಿ ಉದ್ಯಮಶೀಲತಾಭಿವೃದ್ಧಿಗೆ ಸಂಬಂಧಿಸಿದಂತೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1. ಒಂದು ದಿನದ ಉದ್ಯಮಶೀಲತಾ ಪ್ರೇರಣಾ ಶಿಬಿರಗಳು
2. ಮೂರು ದಿನಗಳ ಉದ್ಯಮಶೀಲತಾ ತಿಳುವಳಿಕಾ ಕಾರ್ಯಕ್ರಮಗಳು
3. ಹತ್ತು ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳು
4. ಮೂವತ್ತು ದಿನಗಳ ವಲಯಾಧಾರಿತ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳು

Centre for Entrepreneurship Development of Karnataka (CEDOK) does not provide skill training. However, the following programmes are being implemented in the state for entrepreneurship development.

1. One-day Entrepreneurship Motivation Camps.
2. Three-days Entrepreneurship Awareness Programmes.
3. Ten-days Entrepreneurship Development Programmes
4. Thirty days sector specific entrepreneurship development programmes.

(ಆ) ಕಳೆದ 5 ವರ್ಷದಿಂದ ಇಲ್ಲಿಯವರೆಗೂ ಸರ್ಕಾರ ಇಲಾಖೆಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು; ಇದರಲ್ಲಿ ಬಳಕೆಯಾಗಿರುವ ಹಾಗೂ ಉಳಿಕೆ ಅನುದಾನವೆಷ್ಟು;

ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಗೆ ಕಳೆದ 5 ವರ್ಷದಿಂದ ಬಿಡುಗಡೆಯಾಗಿರುವ ಅನುದಾನದ ವಿವರ ಈ ಕೆಳಕಂಡಂತಿದೆ:

**(ರೂ. ಲಕ್ಷಗಳಲ್ಲಿ)**

| **ವರ್ಷ** | **ಹಂಚಿಕೆಯಾದ ಅನುದಾನ** | **ಬಿಡುಗಡೆಯಾದ ಅನುದಾನ** | **ವೆಚ್ಚವಾದ ಅನುದಾನ** | **ಬಾಕಿ ಉಳಿದ ಅನುದಾನ** |
|---|---|---|---|---|
| 2020-21 | 54299.54 | 51201.52 | 33190.96 | 18010.56 |
| 2021-22 | 46628.63 | 45320.13 | 42340.15 | 2979.98 |
| 2022-23 | 47855.86 | 46828.04 | 45895.07 | 932.97 |
| 2023-24 | 74422.79 | 74407.61 | 71211.14 | 3196.47 |
| 2024-25 | 91155.52 | 90490.52 | 83620.66 | 6869.86 |

Budget Allotted details for 5 years for Department of Industrial Training & Employment are as below.

**(Rs. in Lakahs)**

| **Year** | **Allotted Budget** | **Released Budget** | **Expenditure** | **Balance Budget** |
|---|---|---|---|---|
| **2020-21** | **54299.54** | **51201.52** | **33190.96** | **18010.56** |
| 2021-22 | 46628.63 | 45320.13 | 42340.15 | 2979.98 |
| 2022-23 | 47855.86 | 46828.04 | 45895.07 | 932.97 |
| 2023-24 | 74422.79 | 74407.61 | 71211.14 | 3196.47 |
| 2024-25 | 91155.52 | 90490.52 | 83620.66 | 6869.86 |

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮಕ್ಕೆ 2017-18 ನೇ ಸಾಲಿನಿಂದ 2025-26ನೇ ಸಾಲಿನವರೆಗೆ ಆಡಳಿತಾತ್ಮಕ ವೆಚ್ಚಗಳನ್ನು ಒಳಗೊಂಡಂತೆ ಒಟ್ಟಾರೆ ರೂ.**47801.42**ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ.

(ವಿವರ **ಅನುಬಂಧ-2** ರಲ್ಲಿ ನೀಡಿದೆ.)

A total grant of ₹47801.42 lakh, including administrative expenditure, has been released to the Karnataka Skill Development Corporation from financial year 2020–21 to 2025–26.

(Details are enclosed at **Annexure–2**)

ಕಳೆದ 5 ವರ್ಷದಿಂದ ಸರ್ಕಾರವು ಜಿಟಿಟಿಸಿ ಸಂಸ್ಥೆಗೆ ಬಿಡುಗಡೆ ಮಾಡಿರುವ ಅನುದಾನದ ವಿವರಗಳನ್ನು **ಅನುಬಂಧ-3**ರಲ್ಲಿ ನೀಡಿದೆ.

Details of grants released by the Government to GTTC for the last 5 years are enclosed at **Annexure-3**

ಕಳೆದ 5 ವರ್ಷದಿಂದ ಇಲ್ಲಿಯವರೆಗೂ ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ ಮತ್ತು ಗ್ರಾಮೀಣ ಸ್ವ-ಉದ್ಯೋಗ

The details of the Fund released by the Government under the DeenDayal Upadhyaya Grameen Kaushalya Yojana and the Rural Self Employment Training Institutes Programme for

ತರಬೇತಿ ಕೇಂದ್ರ ಯೋಜನೆಯಡಿ ಸರ್ಕಾರವು ಬಿಡುಗಡೆ ಮಾಡಿರುವ ಅನುದಾನದ ವಿವರವನ್ನು **ಅನುಬಂಧ-4**ರಲ್ಲಿ ನೀಡಿದೆ.

ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್)ಕ್ಕೆ ಉದ್ಯಮಶೀಲತಾ ತರಬೇತಿಗೆ ಈ ಕೆಳಗಿನಂತೆ ಅನುದಾನ ಬಿಡುಗಡೆಯಾಗಿರುತ್ತದೆ.

(ರೂ.ಲಕ್ಷಗಳಲ್ಲಿ)

| ವರ್ಷ | ಬಿಡುಗಡೆಯಾದ ಅನುದಾನ | ಖರ್ಚಾದ ಅನುದಾನ | ಉಳಿಕೆಯಾದ ಅನುದಾನ |
|---|---|---|---|
| 2020-21 | 700-00 | 700-00 | 00 |
| 2021-22 | 500-00 | 500-00 | 00 |
| 2022-23 | 500-00 | 500-00 | 00 |
| 2023-24 | 500-00 | 500-00 | 00 |
| 2024-25 | 500-00 | 500-00 | 00 |

the last five years till date are enclosed at **Annexure-4**.

The following grants have been released for entrepreneurship training to the Centre for Entrepreneurship Development of Karnataka (CEDOK):

(Rs. in Lakhs)

| Year | Grants released | Expenditure | Remaining Grant |
|---|---|---|---|
| 2020-21 | 700-00 | 700-00 | 00 |
| 2021-22 | 500-00 | 500-00 | 00 |
| 2022-23 | 500-00 | 500-00 | 00 |
| 2023-24 | 500-00 | 500-00 | 00 |
| 2024-25 | 500-00 | 500-00 | 00 |

(ಇ) ರಾಜ್ಯದ ನಿರುದ್ಯೋಗಿ ಯುವಕರಿಗೆ ಅಥವಾ ಶಾಲೆಯಿಂದ ಹೊರಗುಳಿದ 18 ರಿಂದ 35 ವರ್ಷದವರಿಗೆ ಮಾತ್ರ ತರಬೇತಿ ನೀಡಲು ಮಾರ್ಗಸೂಚಿಯಲ್ಲಿರುವುದರಿಂದ ಅನರ್ಹ ವ್ಯಕ್ತಿಗಳ ತರಬೇತಿಗೆ 3.90 ಕೋಟಿ ರೂ ವೆಚ್ಚ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**ಹೌದು.**

**2.1.9.1** Registration of Trainees - a) Selection of ineligible candidates **ರಡಿ ಮಹಾಲೇಖಪಾಲರ ಆಡಿಟ್ ವರದಿಯಲ್ಲಿ** ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಲ್ಲಿ **ಈ ಕೆಳಕಂಡಂತೆ ಆಕ್ಷೇಪಣೆ ನಮೂದುಗೊಂಡಿರುತ್ತದೆ.**

| Year | No of Candidates trained | No of overaged trainees | Cost of training overaged trainers (Rs.) |
|---|---|---|---|
| 2018-19 | 4,970 | 185 | 22,45,856 |
| 2019-20 | 10,860 | 420 | 51,14,616 |
| 2020-21 | 23,626 | 832 | 94,58,396 |
| 2021-22 | 41,410 | 738 | 79,12,478 |
| 2022-23 | 34,956 | 1,312 | 1,42,88,650 |
| **Total** | **1,15,822** | **3,487** | **3,90,78,537** |

ಈ ಕುರಿತು ಮಹಾಲೇಖಪಾಲರಿಗೆ ನೀಡಿರುವ ಸ್ಪಷ್ಟೀಕರಣದಲ್ಲಿ (ಡಿಸೆಂಬರ್ 2024) ಅಭ್ಯರ್ಥಿಗಳ ಆರ್ಥಿಕ ಹಿನ್ನೆಲೆಯನ್ನು ಪರಿಗಣಿಸಿ, ಮಾನವೀಯ ನೆಲೆಯ ಮೇಲೆ ಮಿತಿವಯಸ್ಸು ಮೀರಿ ಇರುವ ಕೆಲವು ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದೆ. ಅಭ್ಯರ್ಥಿಗಳ ನೋಂದಣಿ ಸಂದರ್ಭದಲ್ಲಿ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ಸರ್ಕಾರದ ಆದೇಶ ಸಂಖ್ಯೆ : ಕೌಉಜೀಇ 49 ಕೈತಶಿ 2017 (ಭಾಗ-1) ದಿನಾಂಕ:08.05.2017ರ ಮಾರ್ಗಸೂಚಿಯನ್ವಯ ನೂತನ ಯೋಜನೆಯನ್ನು ಅನುಷ್ಠಾನಗೊಳಿಸಬೇಕಾದ ಹಾಗೂ ಈ ಸಂಬಂಧ ಸೃಜಿಸಲಾದ ಪ್ರಾಥಮಿಕ ಹಂತದ ಪೋರ್ಟಲ್ ನಲ್ಲಿನ ಲೋಪದೋಷಗಳ/ನ್ಯೂನತೆ ಕಾರಣ ಹಾಗೂ ಕಡಿಮೆ ವಯಸ್ಸಿನ ಯುವಕರ ಕೌಶಲ್ಯೀಕರಣಕ್ಕಾಗಿ ಉತ್ತಮ ಸೌಲಭ್ಯಗಳನ್ನು ಒದಗಿಸಲು ಸದರಿ ಆದೇಶದಲ್ಲಿ ಸೂಚಿಸಲಾಗಿದ್ದು, ತದನಂತರ ಅವಧಿಯಲ್ಲಿ ಹಂತ ಹಂತವಾಗಿ ನ್ಯೂನತೆಯನ್ನು ಸರಿಪಡಿಸಲಾಗಿರುತ್ತದೆ. ಭವಿಷ್ಯದಲ್ಲಿ ಕೌಶಲ್ಯ ಮಿಷನ್ ಕಟ್ಟುನಿಟ್ಟಾಗಿ

**Yes.**

Under Section 2.1.9.1– Registration of Trainees: (a) Selection of Ineligible Candidates, the Accountant General's Audit Report has recorded the following observations of KSDC.

| Year | No of Candidates trained | No of overaged trainees | Cost of training overaged trainers (Rs.) |
|---|---|---|---|
| 2018-19 | 4,970 | 185 | 22,45,856 |
| 2019-20 | 10,860 | 420 | 51,14,616 |
| 2020-21 | 23,626 | 832 | 94,58,396 |
| 2021-22 | 41,410 | 738 | 79,12,478 |
| 2022-23 | 34,956 | 1,312 | 1,42,88,650 |
| **Total** | **1,15,822** | **3,487** | **3,90,78,537** |

In reply (December 2024), considering the economic background of certain candidates, a few individuals who had exceeded the prescribed age limit were selected on humanitarian grounds. During the registration of candidates, as per the Government Order No. SDEL 49 ITA 2017 (Part–1) dated: 08.05.2017, issued by the Karnataka Skill Development Corporation, the newly introduced scheme had to be implemented. Due to deficiencies / limitations in the initial version of the portal created for this purpose, and in view of providing better skilling facilities for younger candidates, certain relaxations were provided as indicated in the said order. It has further been stated that these deficiencies were rectified in a phased manner during the subsequent period. The Skill Mission has informed that, in the future, the prescribed standards and norms will be strictly adhered to.

| | | |
|---|---|---|
| | ನಿಗದಿತ ಮಾನದಂಡಗಳನ್ನು ಪಾಲಿಸುವುದಾಗಿ ತಿಳಿಸಲಾಗಿರುತ್ತದೆ.<br><br>ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್) ದಿಂದ ಅನುಷ್ಠಾನಗೊಳಿಸಲಾಗುತ್ತಿರುವ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳಿಗೆ ಕನಿಷ್ಠ ವಯಸ್ಸು 18 ಇದ್ದು, ಗರಿಷ್ಠ ಮಿತಿ ಇರುವುದಿಲ್ಲ. ಆದರೆ, ಸ್ವಂತ ಉದ್ಯಮ ಮಾಡಲು ಬಯಸುವ ಆಸಕ್ತರಿಗೆ ಉದ್ಯಮಶೀಲತಾಭಿವೃದ್ಧಿ ತರಬೇತಿಯನ್ನು ಹಮ್ಮಿಕೊಳ್ಳಲಾಗುತ್ತಿದೆ. | The minimum age for Entrepreneurship Development Programs implemented by the Centre for Entrepreneurship Development of Karnataka (CEDOK) is 18 and there is no upper age limit. However, entrepreneurship development training is being organized for those who are interested in starting their own Enterprise. |
| ಈ) ಹಿಂದುಳಿದ ಪ್ರದೇಶದ ಅಭ್ಯರ್ಥಿಗಳಿಗೆ ನೆರವಾಗಲಿರುವ ಕೌಶಲ್ಯ ರಥ ಎಂಬ ಯೋಜನೆ ಎಷ್ಟು ಜಿಲ್ಲೆಗಳಲ್ಲಿವೇ: ಎಷ್ಟು ಜನರಿಗೆ ತರಬೇತಿ ನೀಡುವ ಉದ್ದೇಶ ಹೊಂದಿದೆ; ಹಾಗೂ ಸರ್ಕಾರದ ಉದ್ದೇಶದಂತೆ ಪೂರ್ಣಪ್ರಮಾಣದಲ್ಲಿ ಅಭ್ಯರ್ಥಿಗಳು ತರಬೇತಿ ಪಡೆದಿದ್ದಾರೆಯೇ; | ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ವತಿಯಿಂದ<br>• ಕೌಶಲ್ಯ ರಥ ಎಂಬ ಕಾರ್ಯಕ್ರಮವನ್ನು **ರಾಯಚೂರು, ಯಾದಗಿರಿ, ದಕ್ಷಿಣ ಕನ್ನಡ ಹಾಗೂ ಉಡುಪಿ** ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲಾಗಿರುತ್ತದೆ. ಈ ಕಾರ್ಯಕ್ರಮವನ್ನು ಜಿಲ್ಲಾ ಕೇಂದ್ರಗಳಲ್ಲಿ ಕೌಶಲ್ಯ ತರಬೇತಿ ಕೇಂದ್ರಗಳಿಗೆ ತಾಲ್ಲೂಕು ಹಾಗೂ ಅತಿ ಹಿಂದುಳಿದ ಗ್ರಾಮೀಣ ಪ್ರದೇಶದ ಯುವಕ-ಯುವತಿಯರಿಗೆ ಕೌಶಲ್ಯ ತರಬೇತಿಯನ್ನು ಪಡೆಯಲು ಪೂರಕವಾಗುವಂತೆ ಅವರಿರುವ ಸ್ಥಳಕ್ಕೆ ತೆರಳಿ ತರಬೇತಿ ನೀಡುವ ಸಂಬಂಧ ಸ್ಕಿಲ್ಸ್ ಆನ್ ವೀಲ್ಸ್ (ಕೌಶಲ್ಯ ರಥ / ನೈಪುಣ್ಯ ರಥ) ಯೋಜನೆಯನ್ನು ವಿನೂತನ ಅನುಷ್ಠಾನಗೊಳಿಸಿದೆ.<br>• **ಉದ್ದೇಶ:** ರಾಜ್ಯದ ಗ್ರಾಮೀಣ ಯುವಜನರಿಗೆ ಅಲ್ಪಾವಧಿ ಕೌಶಲ್ಯಾಧಾರಿತ ತರಬೇತಿಯೊಂದಿಗೆ ಜೀವನೋಪಾಯದ ಅವಕಾಶಗಳನ್ನು ಹೆಚ್ಚಿಸುವ ಉದ್ದೇಶ ಹೊಂದಿದೆ.<br>• **2022-23**ನೇ ಸಾಲಿನಲ್ಲಿ ಯಾದಗಿರಿ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ತಲಾ 75 ಅಭ್ಯರ್ಥಿಗಳಿಗೆ ಅನುಕ್ರಮವಾಗಿ Assistant Beauty Therapist & Assistant Electrician ಜಾಬ್ ರೋಲ್ ನಡಿ ಹಾಗೂ **2023-24**ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 45 ಅಭ್ಯರ್ಥಿಗಳು ಮತ್ತು ಉಡುಪಿ ಜಿಲ್ಲೆಯಲ್ಲಿ 60 ಅಭ್ಯರ್ಥಿಗಳಿಗೆ ಅನುಕ್ರಮವಾಗಿ Assistant Electrician & Assistant Beauty Therapist ಜಾಬ್ ರೋಲ್ ನಡಿ ತರಬೇತಿಯನ್ನು ನೀಡಲಾಗಿದೆ. | Under Karnataka Skill Development Corporation (KSDC)<br>• The Kaushalya Ratha (Skill on Wheels) programme has been implemented on a pilot basis in Raichur, Yadgir, Dakshina Kannada, and Udupi districts.<br>• Objective: To enhance livelihood opportunities for rural youth in the State by providing short-term, skill-based training.<br>• During 2022–23, training was provided to 75 candidates each in Yadgir and Raichur districts under the job roles Assistant Beauty Therapist and Assistant Electrician respectively. During 2023–24, 45 candidates in Dakshina Kannada and 60 candidates in Udupi district were trained under the job roles Assistant Electrician and Assistant Beauty Therapist respectively. |
| ಉ) ಎಷ್ಟು ತರಬೇತಿ ಸಂಸ್ಥೆಗಳಿಗೆ ತರಬೇತಿ ನೀಡಲು ಸರ್ಕಾರದಿಂದ ಅನುಮತಿ ನೀಡಲಾಗಿತ್ತು ಹಾಗೂ ತರಬೇತಿಯಲ್ಲಿ ಯಾವುದೇ ನ್ಯೂನ್ಯತೆಗಳು ಕಂಡು ಬಂದಿರುವುದಿಲ್ಲವೇ? (ಸಂಸ್ಥೆಗಳ ಪೂರ್ಣ ವಿವರಗಳನ್ನು ನೀಡುವುದು) | ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮdದ ವತಿಯಿಂದ ಮೆ: Shristi infotech ಉಡುಪಿ ಜಿಲ್ಲೆಯ ಸಂಸ್ಥೆಯಿಂದ ಸರ್ಕಾರದ ಆದೇಶದನ್ವಯ 04 ಜಿಲ್ಲೆಗಳಲ್ಲಿ ಕೌಶಲ್ಯಾಧಾರಿತ ತರಬೇತಿ ನೀಡಲಾಗಿದ್ದು, **ಆಡಿಟ್ ತಪಾಸಣೆಯ 2.1.8.3**ರಡಿ **ಅನುಷ್ಠಾನ ಸಂಸ್ಥೆಗಳಿಂದ ನಿಧಿಯ ಬಳಕೆ**ಯ ಕುರಿತು ಪ್ರಸ್ತಾಪಿಸಲಾಗಿದ್ದು, ಸರ್ಕಾರವು (ಡಿಸೆಂಬರ್ 2024) ನೀಡಿದ ಪ್ರತಿಕ್ರಿಯೆಯಲ್ಲಿ, ಕಡಿಮೆ ಅವಧಿಯ ಮತ್ತು ಹೆಚ್ಚಿನ ಬೇಡಿಕೆಯ ಕಾರಣದಿಂದಲೇ ಸಂಬಂಧಿತ ಜಾಬ್ ರೋಲ್‌ಗಳನ್ನು ಆಯ್ಕೆ ಮಾಡಲಾಗಿತ್ತೆಂದು ತಿಳಿಸಿದೆ. ಇದಲ್ಲದೇ, ಮೇಲ್ಕಾಣಿಸಿದ ಜಿಲ್ಲೆಗಳಲ್ಲಿ ತರಬೇತಿ ಯಶಸ್ವಿಯಾಗಿ ಪೂರ್ಣಗೊಂಡಿದ್ದು, ಉಳಿದ ನಿಧಿಗಳನ್ನು ಬಳಸಿಕೊಳ್ಳಲಾಗುತ್ತದೆ. ಅದರಂತೆ ಬಿಡುಗಡೆ ಮಾಡಿದ ನಿಧಿಗಳ ಶೇಕಡಾ 94 ರಷ್ಟು ಐದು ವರ್ಷಗಳಿಗಿಂತ ಹೆಚ್ಚು ಅವಧಿಯವರೆಗೆ ಬಳಸದೆ ಉಳಿಕೆಗೊಂಡಿದ್ದು, ಗುರಿಯನ್ವಯ 7,500 | Under Karnataka Skill Development Corporation (KSDC) as per the Government order, M/s Shristi Infotech, an institution based in Udupi district, was assigned to provide skill-based training across four districts. **Audit Observation 2.1.8.3 highlighted** issues related to the utilization of funds by the implementing agency.<br><br>In its response (December 2024), the Government clarified that the selected job roles were chosen due to their short duration and high demand. It was further stated that the training programmes in the concerned districts were successfully completed, and that the remaining funds would be utilized accordingly.<br><br>The Audit also noted that 94% of the released funds remained unutilized for more than five years, and against the target of 7,500 candidates, only 150 candidates (2%) received practical training. |

| | | |
|---|---|---|
| | ಅಭ್ಯರ್ಥಿಗಳಲ್ಲಿ ಕೇವಲ 150 ಅಭ್ಯರ್ಥಿಗಳಿಗೆ (ಎರಡು ಶೇಕಡಾ) ಮಾತ್ರ ಪ್ರಾಯೋಗಿಕ ತರಬೇತಿ ನೀಡಲಾಗಿರುತ್ತದೆ. ಸದರಿ ಆರ್ಥಿಕ ವರ್ಷದ ಆಡಿಟ್ ನಂತರ 2023-24ನೇ ಸಾಲಿನಲ್ಲಿ ದಕ್ಷಿಣಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ಒಟ್ಟಾರೆ 105 ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದೆ. ನಿಗದಿತ ಗುರಿಗಿಂತ ಕಡಿಮೆ ಅಭ್ಯರ್ಥಿಗಳಿಗೆ ತರಬೇತಿ ನೀಡಿರುವುದನ್ನು ಹೊರತುಪಡಿಸಿ ಯಾವುದೇ ನ್ಯೂನತೆಗಳು ಕಂಡು ಬಂದಿರುವುದಿಲ್ಲ. | Following the audit for the respective financial year, a total of 105 candidates were trained during 2023–24 in Dakshina Kannada and Udupi districts. Except for the shortfall in achieving the prescribed training targets, no other deficiencies were observed. |

**ಸಂಖ್ಯೆ: ಕೌಉಜೀಇ 31 ಕೌಗುಪ್ರ 2025**

**(ಡಾ. ಶರಣಪ್ರಕಾಶ ಆರ್ ಪಾಟೀಲ್)**
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ
ಸಚಿವರು.

## ಅನುಬಂಧ-1

### ಯೋಜನೆಗಳ ವಿವರ

**ರಾಜ್ಯ ಸರ್ಕಾರದ ಯೋಜನೆ / ಕಾರ್ಯಕ್ರಮಗಳು**: ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ

1. **ಯುವನಿಧಿ ಪ್ಲಸ್:** ಯುವನಿಧಿ ಯೋಜನೆಯಡಿ ನೋಂದಣಿಗೊಂಡಿರುವ ಫಲಾನುಭವಿಗಳಿಗೆ ಕೌಶಲ್ಯ ತರಬೇತಿಯೊಂದಿಗೆ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ತರಬೇತಿ ನೀಡುವುದು.

2. **Industry linkage Cell (ILC), Future Skills**: ಯುವನಿಧಿ ಯೋಜನೆಯಡಿ ನೋಂದಣಿಗೊಂಡಿರುವ ಹಾಗೂ ಇತರೆ ನಿರುದ್ಯೋಗಿ ಯುವಕರಿಗೆ Industry Linkage Cell ಮೂಲಕ ಕೈಗಾರಿಕೆಗಳಲ್ಲಿ ಬೇಡಿಕೆ ಇರುವ ಹಾಗೂ Future Skills ಕೌಶಲ್ಯ ಗಳಿಗೆ ಸಂಬಂಧಿಸಿದ ತರಬೇತಿ ನೀಡುವುದು.

3. **ಕಲಿಕೆ ಜೊತೆಗೆ ಕೌಶಲ್ಯ**: ಉನ್ನತ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಪದವಿ ಕಾಲೇಜುಗಳಲ್ಲಿ ಬಿ.ಎ. ಬಿಕಾಂ, ಬಿಎಸ್ಸಿ ವ್ಯಾಸಂಗ ಮಾಡುತ್ತಿರುವ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಮೂರು ಕ್ರೆಡಿಟ್ ಗಳ 50 ಗಂಟೆಗಳ ಅವಧಿಯ ADOBE Microsoft, Cisco ಇತ್ಯಾದಿ ಕೈಗಾರಿಕಾ ಭಾಗೀದಾರರೊಂದಿಗೆ ಕೌಶಲ್ಯ ತರಬೇತಿಯನ್ನು ನೀಡುವುದು.

4. **ಅಳಿವಿನಂಚಿನಲ್ಲಿರುವ ಪಾರಂಪರಿಕ ಮತ್ತು ಪ್ರಾದೇಶಿಕ ಕೌಶಲ್ಯ ತರಬೇತಿ** : **2025-26 ನೇ ಸಾಲಿನ ಆಯವ್ಯಯ ಕಂಡಿಕೆ 255 ರಡಿ** ಅಳಿವಿನಂಚಿನಲ್ಲಿರುವ **ಪಾರಂಪರಿಕ ಮತ್ತು ಪ್ರಾದೇಶಿಕ** ಕೌಶಲ್ಯಗಳನ್ನು ಮುಂದಿನ ಪೀಳಿಗೆಗೆ ತಲುಪಿಸಲು **2,000** ಅಭ್ಯರ್ಥಿಗಳಿಗೆ ಅಗತ್ಯವಿರುವ ಟೂಲ್‌ಕಿಟ್‌ಗಳೊಂದಿಗೆ ಅಲ್ಪಾವಧಿ ತರಬೇತಿಯನ್ನು ನೀಡಲಾಗುವುದು. ಲಂಬಾಣಿ ಜನಾಂಗದ ಕಸೂತಿ ಕಲೆಯ ಬಗ್ಗೆ ತರಬೇತಿಯನ್ನು **1000** ಅಭ್ಯರ್ಥಿಗಳಿಗೆ ದಾವಣಗೆರೆ ಮತ್ತು ಬೀದರ್ ಜಿಲ್ಲೆಗಳಲ್ಲಿನ ಕೌಶಲ್ಯ ತರಬೇತಿ ಕೇಂದ್ರಗಳಲ್ಲಿ ನೀಡಲಾಗುವುದು ಎಂದು ಘೋಷಿಸಲಾಗಿದ್ದು, ತರಬೇತಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ, ಈಗಾಗಲೇ ಕಾರ್ಯಾದೇಶ ನೀಡಲು ಕ್ರಮವಹಿಸಲಾಗಿದೆ.

5. **ಶುಶ್ರೂಷಕರಿಗೆ ವಿದೇಶಿ ಭಾಷಾ ತರಬೇತಿ** : ಶುಶ್ರೂಷಕರಿಗೆ ವಿದೇಶಗಳಲ್ಲಿ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ ವಿದೇಶಿ ಭಾಷಾ ತರಬೇತಿಗಳ ನೊಂದಣಿ, ವಿದೇಶಗಳಲ್ಲಿ ಹೆಲ್ತ್ ಕೇರ್ ವಲಯದಲ್ಲಿ ಉದ್ಯೋಗಾವಕಾಶ ಪಡೆಯಲು ಅವಶ್ಯವಿರುವ ಕಡ್ಡಾಯ ಪ್ರವೇಶ ಪರೀಕ್ಷೆಗಳ ಕುರಿತು ಮಾರ್ಗದರ್ಶನ ಒದಗಿಸಲು ಹಾಗೂ ಉದ್ಯೋಗದಾತರ ಪ್ರಾಥಮಿಕ ಸಂದರ್ಶನ (Conclave) ಆಯೋಜಿಸುವುದು ಹಾಗೂ ರಾಜ್ಯದ ನರ್ಸಿಂಗ್ ವಿದ್ಯಾರ್ಥಿಗಳಿಗೆ ಜರ್ಮನ್, ಇಟಾಲಿಯನ್, ಸ್ಪಾನಿಷ್ ಮತ್ತು ಇತರೆ ವಿದೇಶಿ ಭಾಷಾ ಕೌಶಲ್ಯ ತರಬೇತಿ ನೀಡುವುದು.

(ಪದ್ಮ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ),
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ

## ಅನುಬಂಧ -2

### ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮಕ್ಕೆ ಬಿಡುಗಡೆಗೊಳಿಸಲಾದ ಅನುದಾನದ ವಿವರ

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಆರ್ಥಿಕ ವರ್ಷ | ಬಿಡುಗಡೆಗೊಳಿಸಲಾದ ಅನುದಾನ (ಆಡಳಿತಾತ್ಮಕ ವೆಚ್ಚಗಳನ್ನು ಒಳಗೊಂಡಂತೆ) | ವೆಚ್ಚಗೊಳಿಸಲಾದ ಅನುದಾನ | ಉಳಿಕೆ ಅನುದಾನ |
|---|---|---|---|---|
| 01 | 2020-21 | 7572.99 | 7431.95 | 93.05 |
| 02 | 2021-22 | 8431.91 | 8281.53 | 36.01 |
| 03 | 2022-23 | 9025.70 | 8957.03 | 68.67 |
| 04 | 2023-24 | 8935.77 | 7856.27 | 1079.50 |
| 05 | 2024-25 | 7457.49 | 4555.99 | 2901.50 |
| 06 | 2025-26 (ನವೆಂಬರ್ - 2025 ರ ಅಂತ್ಯಕ್ಕೆ) | 6377.56 | 2918.63 | - |
| Total | | **47801.42** | **40001.40** | **4178.73** |

Padma. S

(ಪದ್ಮ.ಎಸ್)

ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ),
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ

ಅನುಬಂಧ-3

| ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ | | | | | | |
|---|---|---|---|---|---|---|
| ಕೌಉಜೀ ಇಲಾಖೆಯಿಂದ ಪಡೆದ ಅನುದಾನಗಳ ವಿವರ: | | | | | | |
| **ಯೋಜನೆ** | **ಲೆಕ್ಕ ಶೀರ್ಷಿಕೆ** | **2020-21** | **2021-22** | **2022-23** | **2023-24** | **2024-25** |
| SSDI | 4851-00-102-0-18-132 | 14,420.00 | 3,458.00 | 2,700.00 | 3,036.00 | 4,341.38 |
| SDP | 4851-00-102-0-18-133 | 4,314.00 | 235.00 | 3,000.00 | - | |
| SCSP | 4851-00-102-0-18-422 | 208.00 | 113.00 | 180.00 | 686.00 | 823.12 |
| TSP | 4851-00-102-0-18-423 | 140.00 | 76.00 | 120.00 | 278.00 | 335.50 |
| NABARD | 4851-00-102-0-18-436 | 1,664.00 | 1,500.00 | 8,136.00 | 3,512.71 | 4,736.25 |
| NABARD-SCSP | 4851-00-102-0-18-437 | - | - | - | 117.65 | 368.36 |
| NABARD-TSP | 4851-00-102-0-18-438 | - | - | - | 50.42 | 157.86 |
| **Total (A)** | | **20,746.00** | **5,382.00** | **14,136.00** | **7,680.78** | **10,762.47** |
| | | | | | | |
| Other Expenditure | 2851-00-102-0-82-059 | 960.00 | 960.00 | 2,320.00 | 1,520.00 | 1,900.00 |
| SCSP | 2851-00-102-0-82-422 | 350.00 | 350.00 | 342.00 | 342.00 | 427.50 |
| TSP | 2851-00-102-0-82-423 | 190.00 | 190.00 | 138.00 | 138.00 | 172.50 |
| **Total (B)** | | **1,500.00** | **1,500.00** | **2,800.00** | **2,000.00** | **2,500.00** |
| **Total (A+B)** | | **22,246.00** | **6,882.00** | **16,936.00** | **9,680.78** | **13,262.47** |

Padma. S

(ಪದ್ಮ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ),
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ

## ಅನುಬಂಧ-4

ಕಳೆದ 5 ವರ್ಷದಿಂದ ಇಲ್ಲಿಯವರೆಗೂ ಸಂಜೀವಿನಿ-ಕೆ.ಎಸ್.ಆರ್.ಎಲ್.ಪಿ.ಎಸ್‌ನಡಿ ಅನುಷ್ಠಾನಗೊಳಿಸಲಾಗುತ್ತಿರುವ ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ ಮತ್ತು ಗ್ರಾಮೀಣ ಸ್ವ ಉದ್ಯೋಗ ತರಬೇತಿ ಕೇಂದ್ರ ಯೋಜನೆಯಡಿ ಸರ್ಕಾರವು ಬಿಡುಗಡೆ ಮಾಡಿರುವ ಅನುದಾನದ ವಿವರ.

(ರೂ.ಕೋಟಿಗಳಲ್ಲಿ)

| ಕ್ರ. ಸಂ | ಕಾರ್ಯಕ್ರಮ | ವರ್ಷ | ಅನುದಾನದ ವಿವರ | | | |
|---|---|---|---|---|---|---|
| | | | ಆರಂಭಿಕ ಶಿಲ್ಕು | ಬಿಡುಗಡೆ ಯಾದ ಅನುದಾನ | ಬಳಕೆಯಾದ ಅನುದಾನ | ಉಳಿಕೆಯಾದ ಅನುದಾನ |
| 1 | ದೀನ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ (DDU-GKY) (ಶೇ.60 ಕೇಂದ್ರ ಮತ್ತು ಶೇ.40ರಷ್ಟು ರಾಜ್ಯದ ಅನುದಾನ) | 2020-21 | 118.12 | 0.00 | 25.98 | 92.14 |
| | | 2021-22 | 92.14 | 0.00 | 15.70 | 76.44 |
| | | 2022-23 | 76.44 | 2.36 | 16.59 | 62.21 |
| | | 2023-24 | 62.21 | 0.00 | 28.18 | 34.03 |
| | | 2024-25 | 34.03 | 0.37 | 8.15 | 26.25 |
| | | 2025-26 (ಅಕ್ಟೋಬರ್ ಅಂತ್ಯದವರೆಗೆ) | 0 | 27.41 | 19.12 | 8.29 |
| | | **ಒಟ್ಟು** | **382.94** | **30.14** | **113.72** | **299.36** |
| 2 | ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಕೇಂದ್ರ ಯೋಜನೆ (RSETI) (100% ಕೇಂದ್ರ ಅನುದಾನ) | 2020-21 | 3.70 | 7.23 | 2.45 | 8.48 |
| | | 2021-22 | 8.48 | 0.00 | 5.20 | 3.28 |
| | | 2022-23 | 3.28 | 20.17 | 22.67 | 0.78 |
| | | 2023-24 | 0.78 | 22.65 | 20.44 | 3.00 |
| | | 2024-25 | 3.00 | 11.09 | 8.29 | 5.80 |
| | | 2025-26 (ಅಕ್ಟೋಬರ್ ಅಂತ್ಯದವರೆಗೆ) | 0 | 0 | 0 | 0 |
| | | **ಒಟ್ಟು** | **19.24** | **61.14** | **59.05** | **21.34** |
| | | **ಒಟ್ಟು (1+2)** | **402.18** | **91.28** | **172.77** | **320.7** |

(ಸಹಿ)

(ಪದ್ಮ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ),
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ

# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 865
2. ವಿಧಾನ ಪರಿಷತ್ತು ಸದಸ್ಯರ ಹೆಸರು : ಶ್ರೀ ಐವನ್ ಡಿ' ಸೋಜಾ (ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 15.12.2025
4. ಉತ್ತರಿಸಬೇಕಾದ ಸಚಿವರು : ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು

| ಕ್ರಮ. ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಕಸ್ತೂರಿ ರಂಗನ್ ವರದಿಯನ್ನು ಜಾರಿಗೆ ತರಬೇಕೆಂಬ ವಿಷಯದಲ್ಲಿ ರಾಜ್ಯ ಸರ್ಕಾರದ ನಿಲುವೇನು; ಪ್ರಸ್ತುತ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಯಾವ ಹಂತದಲ್ಲಿದೆ; (ವಿವರ ನೀಡುವುದು) | ಡಾ|| ಕಸ್ತೂರಿ ರಂಗನ್ ಸಮಿತಿಯ ವರದಿಯ ಶಿಫಾರಸ್ಸುಗಳನ್ನು ನಿರಾಕರಿಸುವ ಹಾಗೂ ಸದರಿ ವರದಿಯನ್ನು ಆಧರಿಸಿ, ಪಶ್ಚಿಮ ಘಟ್ಟ ಪ್ರದೇಶದಲ್ಲಿ ಪರಿಸರ ಸೂಕ್ಷ್ಮ ಪ್ರದೇಶ ಎಂದು ಘೋಷಿಸುವ ಸಂಬಂಧ ಕೇಂದ್ರ ಸರ್ಕಾರದ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು ಹೊರಡಿಸಿದ ಕರಡು ಅಧಿಸೂಚನೆಯನ್ನು ತಿರಸ್ಕರಿಸುವ ರಾಜ್ಯ ಸಚಿವರ ಸಂಪುಟದ ನಿರ್ಣಯವನ್ನು ಅನುಸರಿಸಿ, ರಾಜ್ಯ ಸರ್ಕಾರದ ನಿಲುವನ್ನು ದಿನಾಂಕ: 30.09.2024 ರ ಪತ್ರದಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. |
| ಆ) | ಕಸ್ತೂರಿ ರಂಗನ್ ವರದಿ ಜಾರಿಗೆ ತಂದಲ್ಲಿ ಕರಾವಳಿ ಭಾಗದಲ್ಲಿ ಉಂಟಾದ ಪರಿಣಾಮಗಳ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; | |
| ಇ) | ಕಸ್ತೂರಿ ರಂಗನ್ ವರದಿಯನ್ನು ನೆರೆಯ ರಾಜ್ಯಗಳು ವಿರೋಧ ವ್ಯಕ್ತಪಡಿಸಿದ್ದು, ಆ ರಾಜ್ಯಗಳಿಗೆ ವಿನಾಯಿತಿ ನೀಡಲಾಗಿದೆ ಎಂದು ವರದಿಯಾಗಿದ್ದು, ಈ ಬಗ್ಗೆ ರಾಜ್ಯದ ನಿಲುವೇನು; (ವಿವರ ನೀಡುವುದು) | |
| ಈ) | ಮಲೆನಾಡು ಮತ್ತು ಕರಾವಳಿ ಜಿಲ್ಲೆಗಳಲ್ಲಿ ಜನರು ತಮ್ಮ ಸ್ಥಳಗಳಲ್ಲಿ ಯಾವುದೇ ಅಭಿವೃದ್ಧಿಯನ್ನು ಮಾಡಲಾಗದೇ ತೊಂದರೆ ಅನುಭವಿಸುತ್ತಿದ್ದು, ಈ ಬಗ್ಗೆ ಇಲಾಖೆ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ಡಾ|| ಕಸ್ತೂರಿ ರಂಗನ್ ವರದಿಯು ಈವರೆವಿಗೂ ಜಾರಿಯಾಗದೇ ಇರುವುದರಿಂದ ಅಭಿವೃದ್ಧಿಯನ್ನು ಮಾಡಲಾಗದೇ ತೊಂದರೆ ಅನುಭವಿಸುತ್ತಿರುವ ಪ್ರಶ್ನೆ ಉದ್ಭವಿಸುವುದಿಲ್ಲ. |
| ಉ) | ಈ ವರದಿಯು ನಮ್ಮ ರಾಜ್ಯದ ಜನರಿಗೆ ಮರಣ ಶಾಸನವಾಗಲಿದ್ದು, ಇದನ್ನು ಸಂಪೂರ್ಣವಾಗಿ ಕೈಬಿಡಲು ಸರ್ಕಾರ ಹಿಂದೇಟು ಹಾಕಲು ಕಾರಣವೇನು? (ವಿವರ ನೀಡುವುದು) | ಡಾ|| ಕಸ್ತೂರಿ ರಂಗನ್ ಸಮಿತಿಯ ವರದಿಯನ್ನಾಧರಿಸಿ, ಕೇಂದ್ರ ಸರ್ಕಾರವು ಹೊರಡಿಸಿದ ಕರಡು ಅಧಿಸೂಚನೆಯನ್ನು ತಿರಸ್ಕರಿಸುವ ರಾಜ್ಯ ಸರ್ಕಾರದ ಸ್ಪಷ್ಟ ನಿಲುವನ್ನು ಕೇಂದ್ರ ಸರ್ಕಾರಕ್ಕೆ ಸಂವಹನಿಸಲಾಗಿರುತ್ತದೆ. |

**ಕಡತ ಸಂಖ್ಯೆ:** ಅಪಜೀ 251 ಇಎನ್ ವಿ 2025

**(ಈಶ್ವರ್ ಬಿ. ಖಂಡ್ರೆ)**
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು